Date: 16-07-2026 OS No.107/2020
(DW-1)

<u>ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.</u>

<u>ಮುಂದುವರೆದ ಪಾಟೀ ಸವಾಲು ಶ್ರೀ ಎನ್ ಡಿ ಎಸ್  ವಾದಿ ಪರ ವಕೀಲರಿಂದಃ</u>

ದಾವಾ ಸ್ವತ್ತನ್ನು 1957 ರಲ್ಲಿ ರಾಮಾ ಹರಿಪಾಟೀಲ ಇವರು ಕ್ರಯಕ್ಕೆ ಪಡೆದಿರುತ್ತಾರೆ ಎಂದರೆ ಸರಿ. ಮುಂದುವರೆದು ಸಾಕ್ಷಿಯು ಸದರಿ ರಾಮಾ ಇವರು ಕುಟುಂಬದಲ್ಲಿ ಹಿರಿಯರಾಗಿದ್ದರಿಂದ ಅವರ ಹೆಸರಿನಿಂದ ಕ್ರಯಕ್ಕೆ ಪಡೆಯಲಾಗಿದೆ ಎಂದು ನುಡಿಯುತ್ತಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ 3-4 ವರ್ಷಗಳ ನಂತರ ಕನಗಲಾ ಗ್ರಾಮದ ರಿ. ಸ. ನಂ. 307/4, 308/1 ಎ, 308/1 ಬಿ , 308/1 ಸಿ ನೇ ಜಮೀನುಗಳನ್ನು ಕ್ರಯಕ್ಕೆ ಪಡೆಯಲಾಗಿದೆ ಎಂದರೆ ಸರಿ. 1973 ರಲ್ಲಿ ಸದರಿ ಜಮೀನುಗಳನ್ನು ಪಾಲು ವಿಭಾಗ ಮಾಡಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಸಾಕ್ಷಿಯ ಸ್ವತಃ 1980 ರಲ್ಲಿ ಪಾಲು ವಿಭಾಗ ಆಗಿದೆ ಎಂದು ನುಡಿಯುತ್ತಾರೆ.

ನಿಡಿ-4 ರ ಪ್ರಕಾರ 1973 ರಲ್ಲಿ ಪಾಲು ವಿಭಾಗವಾಗಿದೆ ಎಂದರೆ ಸಾಕ್ಷಿಯು ನಮ್ಮಗಳ ಮತ್ತು  ನಮ್ಮ ಬಾಹುಬಂದುಗಳ ಮಧ್ಯೆ  ಆಗಿದೆ ಎಂದು ಬರೆಯಲಾಗಿದೆ ಎಂದು ನುಡಿಯುತ್ತಾರೆ. 1961 ರಲ್ಲಿ ನನ್ನ ತಂದೆ ಮೃತಪಟ್ಟಿದ್ದಾರೆ. ದಾವಾ ಸ್ವತ್ತನ್ನು ಕ್ರಯಕ್ಕೆ ಪಡೆದ ಸಂದರ್ಬದಲ್ಲಿ ನನಗೆ ಸುಮಾರು 6 ವರ್ಷ ವಯಸ್ಸಾಗಿತ್ತು. ದಾವಾ ಸ್ವತ್ತನ್ನು ಒಟ್ಟು ಕುಟುಂಬದ ಆದಾಯದಿಂದ ಕ್ರಯಕ್ಕೆ ಪಡೆಯಲಾದ ಸ್ವತ್ತು ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

1980 ರಲ್ಲಿ  ನಮ್ಮ ಮತ್ತು ರಾಮಾ ಹರಿಪಾಟೀಲ ಇವರ ಮಧ್ಯೆ ಪಾಲು ವಿಭಾಗವಾದ ಸಮಯದಲ್ಲಿ ನನ್ನ ತಮ್ಮ-ಅಶೋಕ ಇವರು ಸರಕಾರಿ ಸೇವೆಯಲ್ಲಿ ಇದ್ದುದ್ದರಿಂದ ಪಾಲು ವಿಭಾಗ ಪತ್ರಕ್ಕೆ ಸಹಿ ಮಾಡಿಲ್ಲ ಎಂದರೆ ಸರಿ. ಪಾಲು ವಿಭಾಗದಲ್ಲಿ ಸರ್ವೇ ನಂ. 36/2, 16/12, 16/42 ನೇ ಜಮೀನುಗಳು ರಾಮಾ ಹರಿಪಾಟೀಲ ಇವರಿಗೆ ಬಂದಿರುತ್ತವೆ ಎಂದರೆ ಸಾಕ್ಷಿಯು ಇಲ್ಲ ಅವರಿಗೆ ಸದರಿ ಜಮೀನುಗಳು ಭೂ ನ್ಯಾಯಾಮಂಡಳಿಯಿಂದ ಬಂದಿರುತ್ತವೆ ಎಂದು ನುಡಿಯುತ್ತಾರೆ. ಮುಂದುವರೆದು ಸದರಿ ಪಾಲು ವಿಭಾಗದಲ್ಲಿ  ಸರ್ವೇ ನಂ. 38/2 ಇದರಲ್ಲಿ ಅರ್ಧ ಭಾಗ, 38/4, ಇದರಲ್ಲಿ  1/3 , 38/18  ಇದರಲ್ಲಿ ಅರ್ಧ ಭಾಗ ಮತ್ತು ದಾವಾ ಸ್ವತ್ತು ಈ ಸ್ವತ್ತುಗಳು ರಾಮಾ ಹರಿಪಾಟೀಲ ಇವರ ಪಾಲಿಗೆ  ಬಂದಿರುತ್ತವೆ ಎಂದರೆ ಸರಿಯಲ್ಲ.

ಸವಡಿ ಗ್ರಾಮದ ಸರ್ವೇ ನಂ. 11/27+30+45+49 ಇದರಲ್ಲಿ ¾ ಹಿಸ್ಸೆಯು ರಾಮಾ ಹರಿಪಾಟೀಲ ಇವರ ಪಾಲಿಗೆ ಬಂದಿರುತ್ತದೆ ಎಂದರೆ ಸರಿ. ಸದರಿ ಪಾಲು ವಿಭಾಗದಲ್ಲಿ ನಮಗೆ ಸರ್ವೇ ನಂ. 11/17 ಇದರಲ್ಲಿ ಅರ್ಧ ಭಾಗ , 11/27+37+45+49, 6 ಅಣೆ 4 ಪೈಸೆ ನಮ್ಮ ಭಾಗಕ್ಕೆ ಬಂದಿರುತ್ತದೆ ಎಂದರೆ ಸರಿ. 38/2 ಇದರ ಪೈರಿ ¼ ಹಿಸ್ಸಾ, 38/4 ರಲ್ಲಿ 1/3 ಹಿಸ್ಸಾ, 38/18 ಪೈಕಿ ಅರ್ಧ ಭಾಗ ನೇ ಜಮೀನುಗಳು ನಮ್ಮ ಭಾಗಕ್ಕೆ ಬಂದಿರುತ್ತವೆ ಎಂದರೆ ಸರಿ.

ನಿಡಿ-2 ನೊಂದಾಯಿತ ಪತ್ರವಲ್ಲ ಎಂದರೆ ಸರಿ. 1986 ರಲ್ಲಿ ರಾಮಾ ಹರಿಪಾಟೀಲ ಇವರಿಂದ ದುರಸ್ತಿ ಪತ್ರ ಮಾಡಿಸಿಕೊಂಡಿರುತ್ತೀರಿ, ಅದು ಸಹ ನೊಂದ ಆಗಿಲ್ಲವೆಂದರೆ ಸರಿ. ದಾವಾ ಸ್ವತ್ತನ್ನು ಎತ್ತಿಹಾಕುವ ಉದ್ದೇಶದಿಂದ 1986 ರಲ್ಲಿ ದುರಸ್ತಿ ಪತ್ರ ಎನ್ನುವ ಪತ್ರವನ್ನು ಸೃಷ್ಟಿಸಿಕೊಂಡಿರುತ್ತೀರಿ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಪಾಟೀ ಸವಾಲಿಗೆ ಸಮಯ ಕೋರಿದ್ದರಿಂದ ಸಮಯ ನೀಡಿ ಮುಂದೂಡಲಾಯಿತು.)

ಮರು ವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು , ಹುಕ್ಕೇರಿ.
ಸಂಚಾರಿ ನ್ಯಾಯಾಲಯ, ಸಂಕೇಶ್ವರ.